ನೋಡಿ ಬಿಟ್ಟಿದ್ದಳು. ನನಗೆ ಹೆದರಿಕೆಯಾಗಿತ್ತು. ಕೈಯಲ್ಲಿದ್ದ ಮೊಬೈಲ್ ಫೋನಿನಿಂದ ರೆಕಾರ್ಡ್ ಮಾಡಿ ಕೊಂಡಿದ್ದಾಳೆಂಬ ಭಯವೂ ಆಗಿತ್ತು. ನನ್ನ ಅನಾಚಾರಗಳಿಗೆ ಅವಳು ಸಾಕ್ಷಿಯಾಗಿ ಬಿಟ್ಟಿದ್ದಳು. ಅವಳನ್ನು ಹಾಗೆಯೇ ಬಿಡಲು ನನಗೆ ಧೈರ್ಯವಿರಲಿಲ್ಲ. ಅತಿಯಾಗಿ ಕುಡಿದಿದ್ದೆ. ಸಿಟ್ಟೂ ಬಂದಿತ್ತು. ನನ್ನನ್ನು ಕಂಡು ಹೆದರಿ ಓಡಿ ತಪ್ಪಿಸಿಕೊಳ್ಳುವ ಪ್ರಯತ್ನ ನಡೆಸಿದ್ದಳು. ನಾನು ಆಕ್ರೋಶದಿಂದ ರಾಕ್ಷಸನಾಗಿದ್ದೆ. ಅವಳನ್ನು ಹಿಂಬಾಲಿಸಿ ಹೋಗಿ ಹಿಡಿದುಕೊಂಡಿದ್ದೆ. ಪ್ರತಿಭಟಿಸಿದ ಅವಳ ಕುತ್ತಿಗೆಯನ್ನು ಬಿಗಿಯಾಗಿ ಹಿಡಿದಿದ್ದೆ. ಅವಳನ್ನು ಇಲ್ಲವಾಗಿಸಿದರೆ ಈ ಯಾವುದೇ ರಹಸ್ಯ ತಿಳಿಯುವುದಿಲ್ಲವೆಂದುಕೊಂಡಿದ್ದೆ. ಅವಳ ಮೊಬೈಲ್‌ನ್ನು ಬೀಸಿ ಎಸೆದಿದ್ದೆ. ನನ್ನ ಹಿಡಿತಕ್ಕೆ ಅವಳು ಯಾವಾಗಲೋ ಸತ್ತು ಹೋಗಿ ಬಿಟ್ಟಿದ್ದಳು. ಹೊರಗಡೆ ದೀಪದ ಬೆಳಕು ಮ್ಯೂಸಿಯಂನ ಗೋಡೆಯ ಕಿಟಕಿಗಳ ಮೂಲಕವಾಗಿ ಮಂದವಾದ ಬೆಳಕನ್ನು ಚೆಲ್ಲಿತ್ತು.

ಸದ್ಯಕ್ಕೆ ಎಲ್ಲಾದರೂ ಅಲ್ಲಿಯೇ ಬಚ್ಚಿಡಬೇಕಾಗಿತ್ತು. ಮರುದಿನ ಭಾನುವಾರವಾದ್ದರಿಂದ ಯೋಚಿಸಿದರಾಯ್ತು ಎಂದುಕೊಂಡು ಸಾಕ್ಷಿಯ ದೇಹದ ಮೇಲಿನ ಬಟ್ಟೆಗಳು, ಅವಳ ಹ್ಯಾಂಡ್‌ಬ್ಯಾಗ್ ಎಲ್ಲವನ್ನೂ ಒಂದು ಕಡೆ ಗಂಟು ಕಟ್ಟಿ ಇಟ್ಟೆ. ಅವಳ ಶವವನ್ನು ಟ್ಯಾಂಕ್‌ನೊಳಗೆ ಹಾಕಿ ಬಿಟ್ಟೆ. ಸೀನ ಹೇಳಿದ್ದೇನೊ ನಿಜ. ಅವನನ್ನು ಗದರಿಸಿ ಕಳುಹಿಸಿದ ನಂತರ ನಾನು ಶವವನ್ನು ಹೇಗೆ? ಎಲ್ಲಿಗೆ ಸಾಗಿಸಬೇಕೆಂದು ಯೋಚಿಸತೊಡಗಿದೆ. ಸಂಜೆಯಾಗತೊಡಗಿತ್ತು. ನಾನೂ ಹೊರಗೆ ಹೋಗಿರಲಿಲ್ಲ. ಮುಖ್ಯದ್ವಾರವನ್ನು ಒಳಗಿನಿಂದಲೇ ಲಾಕ್ ಮಾಡಿಕೊಂಡು ಬಿಟ್ಟಿದ್ದೆ. ಬೆಳಗ್ಗೆಯಾದರೆ ಎಲ್ಲಾ ವಿದ್ಯಾರ್ಥಿಗಳು, ಸ್ಟಾಫ್‌ಮೆಂಬರ್ಸ್ ಬರುವವರಿದ್ದರು. ಅಷ್ಟರಲ್ಲಿ ಪರಿಹಾರ ಹುಡುಕಬೇಕಿತ್ತು...' ಎಂದು ಯಾವ ಅಳುಕೂ ಇಲ್ಲದೆ ಹೇಳುತ್ತಿದ್ದವರು ಒಂದು ಕ್ಷಣ ನಿಲ್ಲಿಸಿದರು.

ಕುಲಕರ್ಣಿ ಮತ್ತವರ ಸಿಬ್ಬಂದಿ ಆಸಕ್ತಿಯಿಂದ ಕಣ್ಣರಳಿಸಿಕೊಂಡು ಕೇಳಿಸಿಕೊಳ್ಳುತ್ತಿದ್ದರು. ವಿಡಿಯೊ ರೆಕಾರ್ಡ್ ಆಗುತ್ತಿತ್ತು. 'ಮುಂದೆ ಹೇಳಿ ಮುಗಿಸಿ ಬಿಡಿ... ಇನ್ನೇನು ದಹನ ಕಾರ್ಯ ಮಾತ್ರ ಉಳಿದಿದೆ' ಎಂದರು ಕುಲಕರ್ಣಿ ಅಸಹನೆಯಿಂದ.

'ಹೇಳೋಕೇಂತ ನಿರ್ಧಾರ ಮಾಡಿದ್ದೀನಲ್ಲ? ನೇಣು ಹಾಕಿಸುವ ನೀವು ಅರ್ಧ ನೇಣನ್ನೇನು ಹಾಕಿಸೋಲ್ಲವಲ್ಲ?' ಎಂದು ಹೇಳಿದ ಅವರ ಸ್ವರದಲ್ಲಿ ಪಶ್ಚಾತ್ತಾಪ, ನೋವಿನ ಛಾಯೆಯೇ ಇರಲಿಲ್ಲ. ಯಾವುದೋ ವರದಿಯನ್ನೊಪ್ಪಿಸುವಂತೆ ನಿರ್ವಿಕಾರವಾಗಿ ಹೇಳುತ್ತಿದ್ದರು, ಪ್ರೊಫೆಸರ್ ಇಳಂಗೋವನ್.

'ಇವರು ನಾರ್ಮಲ್ ಇರಲಾರರು. ವಿಕೃತ ಮನಸ್ಸಿನವರಿರಬೇಕು. ಛೀ!' ಎಂದು ಫೂತ್ಕರಿಸಿತು ಕುಲಕರ್ಣಿಯವರ ಮನಸ್ಸು.

'ನಂತರ ಯೋಚನೆಯೊಂದು ಹೊಳೆಯಿತು. ತಟ್ಟನೆ ಕಾರ್ಯರೂಪಕ್ಕೆ ತಂದೆ. ಆ ಹುಡುಗಿಯ ಶವ ಹಿಂದಕ್ಕಿಟ್ಟಿದ್ದನ್ನು ಎಳೆದುಕೊಂಡು ಬಂದು ಖಾಲಿಯಿದ್ದ ಟೇಬಲ್ಲಿನ ಮೇಲೆ 'ಡಿಸೆಕ್ಷನ್' ಅಂದರೆ ಛೇದನವನ್ನಾರಂಭಿಸಿದೆ. ಮೈಮೇಲೆ ರಾಕ್ಷಸನ ಆವಾಹನೆಯಾಗಿತ್ತು. ಅವಳ ದೇಹದ ಎಲ್ಲಾ ಅಂಗಾಂಗಗಳನ್ನು ಕತ್ತರಿಸಿ 'ಗ್ಲಾಸ್' ಜಾರ್‌ಗೆ ಹಾಕಿದೆ. ನಂತರ ದೇಹದ ಎಲ್ಲಾ ಮಾಂಸವನ್ನು ಕತ್ತರಿಸಿ ತೆಗೆದು ಅಸ್ಥಿಪಂಜರವನ್ನಾಗಿ ಮಾಡಿದೆ. ಕತ್ತರಿಸಿ ಕೆಳಗೆ ಹಾಕಿದ್ದ ಎಲ್ಲಾ ಮಾಂಸ, ಚರ್ಮದ ಜೊತೆ ಅವಳ ಉಡುಪುಗಳು, ಹ್ಯಾಂಡ್‌ಬ್ಯಾಗ್ ಎಲ್ಲವನ್ನೂ, ಹಿಂದಿರುವ ತ್ಯಾಜ್ಯ ವಸ್ತುಗಳನ್ನು ಹಾಕುವ ಗುಂಡಿಗೆ ಹಾಕಿ ಪೆಟ್ರೋಲ್ ಹಾಕಿ ಸುಟ್ಟು ಬಿಟ್ಟೆ. ನಂತರ ಅಸ್ಥಿಪಂಜರಕ್ಕೆ ಕ್ರಿಮಿಗಳು ಬಾರದೆ ಅದಕ್ಕೆಂದೇ ಇದ್ದ ದ್ರಾವಣವನ್ನು ಲೇಪಿಸಿದೆ. ತಲೆಯ ಬುರುಡೆಯ ಮೇಲೊಂದು ತೂಗು ಕೊಂಡಿ ಹಾಕಿ, ಅದಕ್ಕೆಂದೇ ಇಟ್ಟಿರುವ ಮರದ ಕೇಸ್‌ನೊಳಗೆ ತೂಗುಹಾಕಿ ಗಾಜಿನ ಬಾಗಿಲು ಹಾಕಿದೆ. ಮುಂದಿನ ದಿನ ಅನಾಟಮಿ ಹಾಲ್, ಮ್ಯೂಸಿಯಂಗೆ ಪೇಯಿಂಟ್ ಮಾಡಿಸಿ ಸ್ವಚ್ಛವಾಗಿ ತೊಳೆಸಿಬಿಟ್ಟೆ.